**ಕ್ರಿಮಿನಲ್ ಮಿಸಲೇಯನ್ಸ . ನಂ. 95-2019**

ದಿನಾಂಕಃ 07-10-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲು ಃ ಎದುರುದಾರರ ಪರವಾಗಿ ಶ್ರೀ. ಎಮ್.ಸಿ.ಎಚ್ .**

**ವಕೀಲರಿಂದಃ**

14. ಡಿಸೆಂಬರ 2016 ರಲ್ಲಿ ಎದುರುದಾರರು ಚಿಕಿತ್ಸೆಗಾಗಿ ನನ್ನ ಹಿರಿಯ ಮಗಳು ಮೈಸೂರಿಗೆ ಕರೆದುಕೊಂಡು ಹೋಗಿರುತ್ತಾಳೆ. ತದನಂತರ ಅವರು ದಾಂಡೇಲಿಗೆ ವಾಪಾಸ ಬಂದಿದ್ದು, ಪುನಃ ವಾಪಾಸ ಮೈಸೂರಿಗೆ ಹೋಗಿ ವಾಪಾಸ ಬಂದಿರುವುದಿಲ್ಲ. ಹಾಗಾಗಿ ಎದುರುದಾರರು ಟೌನ್ ಶೀಫ ಮನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಕಾಲಕ್ಕೆ ವಾಸವಿರುವುದಿಲ್ಲ ಎಂದರೆ ಸರಿ. ಎದುರುದಾರರು ಮನೆ ಬಿಟ್ಟು ಹೋಗುವವರಿಗೆ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದು, ಅವರು ಹೋದ ಬಳಿಕ ನನ್ನ 2 ನೇ ಮಗ ನೋಡಿಕೊಳ್ಳುತ್ತಿದ್ದಾನೆ.

15. ನನ್ನ ಹಿರಿಯ ಮಗಳು ಮದುವೆಯಾಗಿ 10 ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಾಗಿರುತ್ತದೆ. ಆಕೆ ಮದುವೆಯಾದಗಿನಿಂದಲೂ ನಾನು ಅಲ್ಲಿಗೆ ಹೋಗಿರುವುದಿಲ್ಲ. ಅವಳು ಸಹ ನಮ್ಮ ಮನೆಗೆ ಬರುತ್ತಿರಲಿಲ್ಲ. ಅರ್ಜಿಯನ್ನು ಬರೆಯಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಎದುರುದಾರರು ಯಾವುದೇ ಸಾರಾಯಿ ಚಟವನ್ನು ಹೊಂದಿರುವುದಿಲ್ಲ. ಅವರು ಕುಡಿತದ ಚಟಕ್ಕೆ ಒಳಗಾಗಿದ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ. ಎದುರುದಾರರಿಗೆ ಎಷ್ಟು ಹೊಲ, ಎಲ್ಲಿ ಇದೆ ಹಾಗೂ ಅದು ಉತ್ಪನ್ನದ ಬಗ್ಗೆ ನನಗೆ ಮಾಹಿತಿ ಇಲ್ಲ. ಮಧ್ಯಂತರ ಜೀವನಾಂಶದ ಅರ್ಜಿಯು ವಜಾಗೊಂಡಿದ್ದು, ಅದರ ಮೇಲೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

16. ನನಗೆ ಯಾವುದೇ ಜೀವನಾಂಶದ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ಮೇಲೆ ಸುಳ್ಳು ಆಪಾದನೆ ಮಾಡಿ, ಅವರು ಮೈಸೂರಿನಲ್ಲಿ ವಾಸವಿರುವ ವಿಷಯ ತಿಳಿದಿದ್ದರೂ ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ಅರ್ಜಿಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತು. ಎದುರುದಾರರು ಪಿಂಚಣಿ ಹಣವನ್ನು ಪಡೆದುಕೊಳ್ಳುವ ದುರದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಈವರೆಗೂ ಸಹ ನಾನು ಹಾಗೂ ಎದುರುದಾರು ಈ ಮುಂಚೆ ವಾಸವಿದ್ದ, ಲೈನಿನ ರಸ್ತೆಯಲ್ಲಿರುವ ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಾ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ